# ಕಾಡಂಚಿನಲ್ಲಿ ಚಿತ್ರೀಕರಣ ಸಂಭ್ರಮ

ಅವತ್ತು ಮಧ್ಯಾಹ್ನ ನಾಲ್ಕಕ್ಕೇ ಪ್ಯಾಕಪ್ ಮಾಡಿ ಯುನಿಟ್ಟಿನವರು ಬೇರೆ ಕೆಲಸದ ಮೇಲೆ ಹೋಗಿದ್ದರು. ಚಂದನಿಕಾ ಸ್ವಲ್ಪ ವಿಶ್ರಮಿಸಿ ಎದ್ದು ಐದು ಗಂಟೆಗೆ ಚಹಾ ಕುಡಿದಳು. ಒಂದೇ ಕಡೆ ಕಟ್ಟಿಹಾಕಿಕೊಂಡಂತಾಗಿ ಸ್ವಲ್ಪ ತಿರುಗಾಡೋಣ ಅನಿಸತೊಡಗಿತ್ತು. ಹತ್ತಿರದಲ್ಲಿ ನದಿಯಿದೆ ಅಂತ ಕೇಳಿದ್ದಳು. ಕಾಂಪೌಂಡಿನ ಹಿಂದುಗಡೆಯಿಂದ ಹೋಗುವ ಕಾಲುಹಾದಿಯಲ್ಲಿ ನಿಧಾನವಾಗಿ ಕಾಲು ಹಾಕತೊಡಗಿದಳು. ಜನಸಂಚಾರವಿರಲಿಲ್ಲ. ಎರಡೂ ಕಡೆ ಬೆಳೆದ ಕರಡದಹುಲ್ಲು. ಮಧ್ಯೆ ಅಲ್ಲಲ್ಲಿ ಬೆಟ್ಟನೆಲ್ಲಿ, ಕೌಲು ಮುಂತಾದ ಸಣ್ಣಗಾತ್ರದ ಗಿಡಗಳು. ಸೆಕೆಯಿಲ್ಲದ ಆದರೆ ಇನ್ನೂ ಚಳಿ ಶುರುವಾಗಿರದ ಹಿತವಾದ ಗಾಳಿ. ದಾರಿ ಅಂಕುಡೊಂಕಾಗಿ ಸಾಗುತ್ತ ತಟ್ಟನೆ ಒಂದು ಇಳಿಜಾರಿಗೆ ಸಾಗಿ ಹೋಗಿತ್ತು. ಇಪ್ಪತ್ತಡಿ ಕೆಳಗೆ ನದಿಯ ಪಾತ್ರ ಕಾಣಿಸಿತು. ಏರಿಯ ಮೇಲೆ ನಿಂತವಳಿಗೆ ದಾರಿ ನದಿಪಾತ್ರದಲ್ಲಿಳಿದು ಆಚೆಕಡೆ ಏರಿಗೆ ಹತ್ತುವುದು ಗೋಚರಿಸಿತು. ಏರಿಯ ಮೇಲೆ ಮರವೊಂದರಡಿ ನಿಂತ ಆನಂದ ಕಾಣಿಸಿದ. ಚಪ್ಪಾಳೆ ತಟ್ಟುವುದಾಗಲಿ, ಕರೆಯುವುದಾಗಲಿ ಸಭ್ಯತನವಾಗಲಾರದು ಅನಿಸಿ ಸುಮ್ಮನೆ ನಿಂತಿರುವಂತೆ ಅವನೆ ಇತ್ತ ನೋಡಿದ. ಮುಖದಲ್ಲಿ ಅಚ್ಚರಿ ಮೂಡಿತು. ಪರಿಚಯವಿಲ್ಲದ ಸ್ಥಳ. ಒಬ್ಬಳೆ ಬಂದಳಾ ಅನಿಸಿ ಕೈ ಮೇಲೆತ್ತಿ ಸಂಜ್ಞೆ ಮಾಡಿ ದಂಡೆಯಂಚಿಗೆ ಬಂದ. ಕಾಲುದಾರಿಯಲ್ಲಿ ಇಳಿದು ನದಿಪಾತ್ರಕ್ಕೆ ಬಂದವ 'ಒಬ್ರೇ ಬಂದ್ರಾ?' ಪ್ರಶ್ನಿಸಿದ.

'ಹೌದು, ತಿರುಗಾಡಬೇಕೆನಿಸ್ತು. ಆಚೆ ಬರಬಹುದಾ?' ಏನೋ ವಿಚಾರ ಮಾಡಿದ ಆನಂದ ನದಿಯನ್ನು ದಾಟಿ ಈ ಕಡೆ ಬಂದ. ಅವಳೂ ಕೆಳಗಿಳಿದು ನದಿಪಾತ್ರಕ್ಕೆ ಬಂದಿದ್ದಳು.

'ನಾನು ಹೆಜ್ಜೆಯಿಟ್ಟಲ್ಲೆ ಇಡತಾ ಬನ್ನಿ. ಮೊಳಕಾಲಷ್ಟು ನೀರು ಬರತದೆ. ಆಚೀಚೆ ಹೋಗಬಾರದು. ತಟ್ಟನೆ ನಾಕೈದಡಿ ತಗ್ಗಾದರೂ ಆಯ್ತು. ನಮ್ಮ ಕಡೆ ಹೊಳೆಗಳೆ ಹಾಗೆ' ಎಚ್ಚರಿಸಿದವ ಆಗಾಗ ಬಲಕ್ಕೂ ಎಡಕ್ಕೂ ಮಾರ್ಗ ಬದಲಿಸುತ್ತ, ಎರಡೆರಡು ಹೆಜ್ಜೆಗೆ ಹಿಂದೆ ನೋಡುತ್ತ ದಾಟಿಸಿದ. ಸಲ್ವಾರು ಮೊಳಕಾಲವರೆಗೆ ಒದ್ದೆಯಾಯಿತು. ಮೇಲೆ ದಂಡೆಗೆ ಹತ್ತಿದರೆ ಎದುರು ಕಣ್ಣು ಹಾಯಿಸಿದಷ್ಟೂ ಭತ್ತದ ಗದ್ದೆ, ಅದರಾಚೆ ದೂರದಂಚಿನಲ್ಲಿ ಯಾವುದೊ

